ಏನನ್ನೂ ಹಚ್ಚಿಕೊಳ್ಳದ ಆ ತಿಳಿನಗುವನ್ನು ನಾನು ಹೇಗೆ ಪ್ರೀತಿಸಲಿ? ಪ್ರೀತಿಸದಿರಲಿ? ಛೆ, ಇವನಲ್ಲಿ ಮಹತ್ವಾಕಾಂಕ್ಷೆಗಳೇ ಇಲ್ಲವೆ? ಇದ್ದದ್ದರಲ್ಲಿ ತೃಪ್ತನಾಗಿ, ಇಲ್ಲದ್ದರ ಬಗ್ಗೆ ತಲೆಯೇ ಕೆಡಿಸಿಕೊಳ್ಳದೆ, ನಿನ್ನೆಯಂತೆ ಇವತ್ತನ್ನು, ಇವತ್ತಿನಂತೆ ನಾಳೆಯನ್ನು ಕಳೆದು ಬಿಡುವ ರವಿಯೊಂದಿಗೆ ನನ್ನ ಬದುಕಿನ ಹಾದಿ ಹೋಗಿ ಕೂಡಿದೆಯೆ?... ನನ್ನ ಪ್ರಶ್ನೆಗಳಿಗೆ ನನ್ನಲ್ಲೂ ಉತ್ತರವಿಲ್ಲ!

★★★

ಮತ್ತೆ ಎಂಟು ವರ್ಷಗಳಲ್ಲಿ ನಾನು ಬಹಳ ಬದಲಾದೆ. ನನ್ನ ಪರಿಸರವೂ ವಿಸ್ತರಿಸಿತ್ತು. ಕಾಲೇಜು, ಪ್ರಾಜೆಕ್ಟ್, ಪೇಪರ್ಸ್, ಕಾನ್‌ಫರೆನ್ಸ್ ಎಂದೇನೇನೋ ಹರಡಿಕೊಂಡಿತ್ತು. ನನ್ನ ಹದಿನಾರರ ಹರೆಯದಲ್ಲಿ ಪ್ರಬುದ್ಧನಾಗಿ, ಪ್ರತಿಭಾವಂತನಾಗಿ ಕಂಡು, ಅಖಂಡವಾಗಿ ಆಕರ್ಷಿಸಿದ್ದ ರವಿ ಈಗ ಬೋರು ಹೊಡೆಸುತ್ತಿದ್ದ.

ನಾನು ಬೆಳೆದೆ – ಕಿಶೋರ ಕಾಲದಾಚೆಗೆ ಕೈ ಕಾಲು ಕೊಂಬೆಗಳ ಚಾಚಿ. ನಾನು ಬೆಳೆದಂತೆಲ್ಲ ಈತ ಗಿಡ್ಡವಾದ. ಲಿಲ್ಲಿಪುಟ್ಟನಾದ. ಕಡೆಗೊಮ್ಮೆ ಕಣ್ಣಿಗೆ ಕಾಣದಷ್ಟು ಸಣ್ಣ ಬಿಂದುವಾದ.

ಹೀಗಿದ್ದೂ ರವಿಯ ಮೇಲೆ ನನ್ನ ಪ್ರಯತ್ನಗಳಾಗಲೀ, ಪ್ರಯೋಗಗಳಾಗಲಿ ನಿಂತಿರಲಿಲ್ಲ. ರವಿ 18ಕ್ಕೆ ಮನೆಯಿಂದ ಓಡಿ ಬಂದದ್ದು, ಬೆಂಗಳೂರು ಸೇರಿದ್ದು, ಕೆಲಸ ಹಿಡಿದದ್ದು, ಈ ಸಾಹಸಗಾಥೆ ಈಗ ಹಳತಾಗಿತ್ತು. ಎಷ್ಟು ದಿನ ಗತವೈಭವದಲ್ಲಿ ವರ್ತಮಾನ ಮರೆತಿರಲು ಸಾಧ್ಯ? ಬದುಕಿಗೆ ಹೊಸತು ಬೇಕು. ಹೊಚ್ಚ ಹೊಸ ಸಾಹಸಗಳು, ಸಾಧನೆಗಳು.

"ರವಿ, ಆ ಸುಂದರ್ ಏನೋ 'ಸಾಫ್ಟ್ ವೇರ್ ಫರ್ಮ್' ತೆಗೀತಾ ಇದ್ದಾನಂತೆ. ನೀನು ಅವನ ಜೊತೆ ಸೇರಿಕೊಂಡು ಏನಾದರೂ ಪ್ರಾರಂಭಿಸಬಾರದೆ? ನಾಲ್ಕು ಸಾಲಿನ ಒಂದು 'ಡಿಬೇಸೋ', 'ಬೇಸಿಕ್ಕೋ' ಪ್ರೋಗ್ರಾಮಿಂಗ್ ಕಲಿತರೆ ಆಯಿತು. ಬರೀ 'ಪೇ ರೋಲ್ಸ್', 'ಇನ್‌ವೆಂಟ್ರಿ' ಮಾಡಿಕೊಟ್ಟರೂ ಸಾವಿರಗಟ್ಟಲೆ ಹಣ ಬರುತ್ತೆ" ನಾನು ಅವನಲ್ಲೊಂದಿಷ್ಟು ಉತ್ಸಾಹ ತುಂಬಲು ಕೊರೆದೆ.

"ಅರೆ ಶಶಿ, ಆಫೀಸಿನಿಂದ ಬರೋದೇ ಆರು ಗಂಟೆ ಆಗಿರುತ್ತೆ. ಅದು ಬೇರೆ ಶುರು ಮಾಡಿ ಹೆಣಗೋದು ಯಾರು? ಅದೂ ಅಲ್ಲದೆ ಅಷ್ಟು ಹಣ ತಗೊಂಡು ಏನು ಮಾಡಬೇಕು? ನಮಗೆ ಬರೋ ಸಂಬಳದಲ್ಲಿ ನೆಮ್ಮದಿಯಾಗಿರಲು ಸಾಧ್ಯವಿಲ್ಲವೆ?"

ನನ್ನೊಳಗೆ ಪುಟಿದಿದ್ದ ಆಸೆಯ ಚಿಲುಮೆ ಅವನ ತಣ್ಣನೆಯ ಮಾತುಗಳಲ್ಲಿ ಹಿಮಗಟ್ಟಿತು. 'ಇವನದೆಲ್ಲ ಅಪ್ಪಟ ಅಭಾವ ವೈರಾಗ್ಯ' ನನ್ನಲ್ಲೇ ಗೊಣಗಿಕೊಂಡೆ. ಹಣ ಯಾರಿಗೆ ಬೇಕು ಅಂತಾನೆ. ಅದೂ ಸರಿದಾರಿಯಲ್ಲಿ ದುಡಿವ ಹಣ ಒಲ್ಲೆ ಅನ್ನುವವರುಂಟೆ? 'ಒಂದು ಬೈಕ್ ಕೊಳ್ಳಬೇಕು' ಅಂತ ಇವನೇ ಸಾವಿರದೊಂದು ಬಾರಿ ಹೇಳಿದ್ದಾನೆ. 'ಮನೆಗೆ ಡಿಸ್‌ಟೆಂಪರ್ ಹಾಕಿಸಬೇಕು; ಮುಂದುಗಡೆ ಬೇಲಿ ತೆಗೆಸಿ ಕಾಂಪೌಂಡು ನಿಲ್ಲಿಸಬೇಕು...' ಎಂಬೆಲ್ಲ ಚಿಂತೆಗಳಿವೆ. ಇವನ ಬದುಕಿನ ಖಾಲಿತನಕ್ಕಿಂತ, ಸೋಲಿಗಿಂತ ನನ್ನಲ್ಲಿ ಅಸಹ್ಯ ಹುಟ್ಟಿಸುವುದು ಇವನ ಅಪ್ರಾಮಾಣಿಕತೆ. ಪ್ರಯತ್ನಹೀನತೆ. ಇಲ್ಲದ್ದನ್ನು ಬೇಕಿಲ್ಲ ಎನ್ನುವ ಸೋಗು. ತಾವೇರಲಾರದ ಎತ್ತರಗಳ ಹಗುರವಾಗಿ ತೇಲಿಸಿಬಿಡುವ ವಕ್ರ ಕಲೆ. ನಿಂತ ಕಡೆ ನಿಂತಲ್ಲೇ ಬಿಡಾರ ಹೂಡಿ, ಒಂದು ಹೆಜ್ಜೆಯೂ ಮುಂದಿಡದ ಅಖಂಡ ಜಡತ್ವ– ನನ್ನಲ್ಲೇ ಮನಸ್ವೀ ಬೈದುಕೊಂಡೆ. ನನ್ನೆಲ್ಲ ನಿರಾಶೆ ಆಕ್ರೋಶ ಹೊರಬಂದಂತೆ ತಡೆದದ್ದು ಅವನ ಪ್ರೀತಿಯೋ, ಇಲ್ಲ ನಮ್ಮ ನಡುವೆ ನಿಂತ ಎಂಟು ವರ್ಷಗಳ ಸಂಬಂಧದ ನಿರ್ಬಂಧನೆಯೋ ತಿಳಿಯದು.